ಅದೊಂದು ವರ್ಣರಂಜಿತ ಸಮಾರಂಭ. ಇಡೀ ವಿಶ್ವವೇ ಕಾತರದಿಂದ ನಿರೀಕ್ಷಿಸುತ್ತಿದ್ದ ವಿಜೃಂಭಣೆಯ ಕಾರ್ಯಕ್ರಮವದು. ಫ್ರಾನ್ಸ್‌ನಲ್ಲಿ 2018ರಲ್ಲಿ ನಡೆದ ಕ್ಯಾನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಭಾಗವಹಿಸಲು ಬಾಲಿವುಡ್ ತಾರೆ ದೀಪಿಕಾ ಪಡುಕೋಣೆ ಕೆಂಪುಹಾಸಿನ ನಡೆದು ಬಂದಾಗ ಇಡೀ ಜಗತ್ತೇ ಈಕೆಯ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ಈಕೆ ತೊಟ್ಟ ಪಾರದರ್ಶಕ ಗೌನ್ ಮೇಲೇ ಫ್ಯಾಷನ್‌ಪ್ರಿಯರ ದೃಷ್ಟಿ ನೆಟ್ಟಿತ್ತು. ಅಲ್ಲದೆ ಈ ದೃಶ್ಯಾವಳಿ ಲಕ್ಷಗಟ್ಟಲೆ ಯುವಕರ ನಿದ್ದೆಗೆಡಿಸಿತ್ತು. ಇದೇ ಸಮಾರಂಭದಲ್ಲಿ ಇನ್ನೊಬ್ಬ ನಟಿ ಕಂಗನಾ ರೌನತ್ ಕೂಡ ಟ್ರಾನ್ಸ್‌ಪರಂಟ್ ಉಡುಗೆಯಲ್ಲೇ ನೋಡುಗರ ಕಣ್ಸೆಳೆದಿದ್ದರು.

ಅಂದಿನಿಂದ ಫ್ಯಾಷನ್ ಪ್ರಪಂಚದಲ್ಲಿ ಪಾರದರ್ಶಕ ಉಡುಗೆ ಬಹಳ ಜನಪ್ರಿಯವಾಯಿತು. ಜೊತೆಗೆ ನಟಿಯರು, ಮಾಡೆಲಿಂಗ್ ತಾರೆಯರು, ಅಷ್ಟೇ ಏಕೆ ಶ್ರೀಮಂತ ವರ್ಗದ ಮಹಿಳೆಯರು, ಮಕ್ಕಳೂ ಈ ಪಾರದರ್ಶಕ ಉಡುಗೆಯತ್ತ ಚಿತ್ತಹರಿಸಿದ್ದರು.

ಟ್ರಾನ್ಸ್‌ಪರಂಟ್ ಉಡುಗೆ ಗೌನ್, ಬ್ಲೌಸ್, ಸಲ್ವಾರ್, ಸೀರೆ... ಹೀಗೆ ಯಾವ ವೈವಿಧ್ಯವೇ ಆಗಿದ್ದರೂ ಅದು ಥಟ್ಟನೆ ಸೆಳೆಯುತ್ತದೆ. ಹಳೆಯ ಕನ್ನಡ ಸಿನಿಮಾಗಳಲ್ಲಿಯೂ ನಟಿಯರು ಪಾರದರ್ಶಕ ಸೀರೆಯುಟ್ಟು ಒಂದೇ ಪದರದ ಸೆರಗು ಹೊದ್ದು ಹೀರೊ ಜೊತೆ ಡ್ಯಾನ್ಸ್ ಮಾಡಿದಾಗ ಎಷ್ಟು ಯುವಕರ ಎದೆಬಡಿತ ಹೆಚ್ಚಿಲ್ಲ ಹೇಳಿ? ಹೀಗೆ ಗ್ಲಾಮರಸ್ ಲುಕ್ ಕೊಡುವ ಟ್ರಾನ್ಸ್‌ಪರಂಟ್ ಉಡುಪು ‘ಎವರ್‌ಗ್ರೀನ್ ಫ್ಯಾಷನ್’ ಆಗಿಬಿಟ್ಟಿದೆ. ಗೌನ್ ಮಾದರಿಯ ಉಡುಗೆಯಲ್ಲಿ ಉದ್ದ ತೋಳುಗಳು ಸಂಪೂರ್ಣ ಪಾರದರ್ಶಕವಾಗಿರುತ್ತವೆ, ದೇಹವನ್ನಾವರಿಸುವ ಕೆಲ ಭಾಗ ಮಾತ್ರ ಅರೆಪಾರದರ್ಶಕ ಪದರಗಳಿಂದ ಕೂಡಿರುತ್ತವೆ. ಇದರಲ್ಲಿನ ತೆಳುವಾದ ಶಿಫಾನ್ ಪದರ ಡ್ರೆಸ್‌ನ ಒಟ್ಟೂ ಅಂದ ಹೆಚ್ಚಿಸಲು ಸಹಕಾರಿಯಾಗಿದೆ.

‘ಸಾಮಾನ್ಯವಾಗಿ ಟ್ರಾನ್ಸ್‌ಪರಂಟ್ ಉಡುಗೆಯಲ್ಲಿ ಗೌನ್‌ಗಳದ್ದೇ ಹೆಚ್ಚಿನ ಪಾರುಪತ್ಯ. ಪಾರ್ಟಿವೇರ್ ಆಗಿಯೂ ಹೆಚ್ಚು ಜನಪ್ರಿಯವಾಗಿರುವ ಇಂತಹ ಮಾದರಿಯ ಉಡುಗೆ ದೇಶ ವಿದೇಶಗಳಲ್ಲಿ ಹಾಟ್‌ಕೇಕ್‌ನಂತೆ ಮಾರಾಟವಾಗುತ್ತಿದೆ’ ಎನ್ನುತ್ತಾರೆ ಬೆಂಗಳೂರಿನ ಕೋರಮಂಗಲದಲ್ಲಿರುವ ನವನೀತ ಫ್ಯಾಷನ್ ಬ್ಯೂಟಿಕ್‌ನ ಒಡತಿ ಹಾಗೂ ಫ್ಯಾಷನ್‌ತಜ್ಞೆ ನೀತಾರಾಣಿ.

‘ಗ್ರಾಹಕರಿಂದ ಹೆಚ್ಚು ಆದ್ಯತೆಯ ಆಯ್ಕೆಗಳಲ್ಲಿ ಪಾರದರ್ಶಕ ಉಡುಗೆಯೂ ಪ್ರಮುಖವಾದದ್ದು. ಸಂಜೆಯ ಕಾರ್ಯಕ್ರಮಕ್ಕೆ ಹೆಚ್ಚು ಸೂಕ್ತವಾದ ಈ ಉಡುಗೆ, ವಿನ್ಯಾಸಕಾರರಿಗೆ ಬಣ್ಣ ಮತ್ತು ಫ್ಯಾಬ್ರಿಕ್ ಟೆಕ್ಚರ್‌ಗಳ ಸಂಯೋಜನೆಯನ್ನು ಹೆಚ್ಚು ನಿಖರವಾಗಿ ರೂಪಿಸಲು ಪ್ರೇರೇಪಿಸುತ್ತದೆ’ ಎಂದು ಹೇಳುತ್ತಾರೆ ನೀತಾ.

ಟ್ರಾನ್ಸ್‌ಪರಂಟ್ ಬ್ಲೌಸ್ ಕೂಡ ಸಂಪ್ರದಾಯಿಕ ಮನೋಭಾವ ಹೊಂದಿರುವ ಆಧುನಿಕ ಮಹಿಳೆಯರ ಆಯ್ಕೆಯೂ ಆಗಿದೆ. ಇದರಲ್ಲಿ ಭುಜಗಳು ಮತ್ತು ತೋಳುಗಳ ಸುತ್ತಲೂ ಪಾರದರ್ಶಕ ಫ್ಯಾಬ್ರಿಕ್ ಬಳಸಲಾಗುತ್ತದೆ. ತೆಳುವಾದ ಹಿಮಧೂಮ ಬಟ್ಟೆಯಿಂದ ಮಾಡಿದ ತೋಳುಗಳು ಸೀರೆಗಳಿಗೆ ಹೆಚ್ಚಿನ ಲುಕ್ ಕೊಡಲು ಸಹಕಾರಿಯಾಗುತ್ತದೆ, ಲಿನಿನ್ ಅಥವಾ ಶಿಫಾನ್ ಬಟ್ಟೆಯಲ್ಲಿ ತಯಾರಿಸಿದ ರವಿಕೆಗಳು ಫ್ಯಾಷನ್‌ಪ್ರಿಯರ ಮೊದಲ ಆಯ್ಕೆಯೂ ಆಗಿರುತ್ತದೆ.

## ಶ್ವೇತವರ್ಣಕ್ಕೆ ಆದ್ಯತೆ

ಬಿಳಿಬಣ್ಣದ ಬಟ್ಟೆ ಮೇಲೆ ಲೇಸ್ ಮತ್ತು ಕಸೂತಿ ಕಲೆ ಮಾಡಿರುವ ಉಡುಗೆ ‘ಸಿಂಡ್ರೆಲಾ ಲುಕ್’ ಕೊಡುವುದರಲ್ಲಿ ಸಂಶಯವೇ ಇಲ್ಲ. ಪಾರದರ್ಶಕ ಬಿಳಿ ಉಡುಗೆ ಪ್ರಣಯ ಮತ್ತು ಕಾಮ ಪ್ರಚೋದನೆಯನ್ನು ಅನಾವರಣಗೊಳಿಸುವ ಪ್ರತೀಕದಂತೆಯೂ ಇದೆ ಎಂಬುದು ನೀತಾ ಅಭಿಪ್ರಾಯ. ಈ ಮಾದರಿಯ ಉಡುಪಿನಲ್ಲಿ ಯಾವುದೇ ಕಟ್ ಇರಲಿ, ಅದು ವಿಶಿಷ್ಟ ಶೈಲಿಯನ್ನು ನಿರೂಪಿಸುತ್ತದೆ. ಈ ರೀತಿಯ ಉಡುಪು ಪ್ರಿಯಕರನ ಭೇಟಿಯ ಸಂದರ್ಭದಲ್ಲಿ, ಡಿನ್ನರ್ ಕೂಟದಲ್ಲಿ, ರೆಸ್ಟೊರೆಂಟ್‌ಗಳಲ್ಲಿ ನಡೆಸುವ ಕಾಕ್‌ಟೇಲ್ ಪಾರ್ಟಿಗಳಲ್ಲಿ ಬಳಸಲು ಸೂಕ್ತವಾಗಿವೆ.

ಅನಾದಿ ಕಾಲದಿಂದಲೂ ಪಾರದರ್ಶಕ ಉಡುಗೆ ಚಾಲ್ತಿಯಲ್ಲಿತ್ತು ಎಂಬುದಕ್ಕೆ ಚಿತ್ರಕಲಾವಿದರು ಪೇಂಟಿಂಗ್ ಮೂಲಕ ಮಾಡುವ ಮೇನಕಾ, ರಂಭಾ, ಊರ್ವಶಿಯರಂತಹ ಸುಂದರಿಯರ ಚಿತ್ರವನ್ನು ಗಮನಿಸಿದರೆ ವೇದ್ಯವಾಗುತ್ತದೆ. ಅಲ್ಲದೆ ಅನೇಕ ವರ್ಷಗಳ ಹಿಂದೆಯೇ ಪಾರದರ್ಶಕ ಬಟ್ಟೆಯಿಂದ ಮಾಡಿದ ಉಡುಪನ್ನು ಅನನ್ಯವೆಂದು ಭಾವಿಸಲಾಗುತ್ತಿತ್ತು. ಇಂತಹ ಪ್ರತಿಯೊಂದು ಉತ್ಪನ್ನದ ಹಿಂದೆ ಫ್ಯಾಷನ್ ವಿನ್ಯಾಸಕರ ಶ್ರಮ ಹೆಚ್ಚಿರುತ್ತದೆ. ಜೊತೆಗೆ ಇಲ್ಲಿ ಸೃಜನಶೀಲತೆಯಿಂದ ಕೂಡಿದ ಕರಕುಶಲ ಕಸೂತಿಯನ್ನೂ ಬಟ್ಟೆಯ ಮೇಲೆ ಒಡಮೂಡಿಸಬೇಕಾಗುತ್ತದೆ. ಪಾರದರ್ಶಕ ಫ್ಯಾಬ್ರಿಕ್ ಮೇಲೆ ರೇಷ್ಮೆ ಎಳೆಗಳಿಂದ ಕಸೂತಿ ಮಾಡಿದ ಉಡುಗೆ ದುಬಾರಿಯಾದರೂ ಪ್ಲೆಸೆಂಟ್ ಲುಕ್ ಕೊಡುತ್ತದೆ. ಇಲ್ಲಿ ಹೂವಿನಾಕಾರ, ಚಿಟ್ಟೆಯಾಕಾರ, ಸೀಕ್ವೆನ್ಸ್ ಡಿಸೈನ್ಸ್ ಹೆಚ್ಚು ಆಕರ್ಷಕವಾಗಿ ಕಾಣಿಸಲು ಸಹಕಾರಿ. ಕಸೂತಿ ಉಡುಪು ನೋಡುಗರನ್ನು ಥಟ್ಟನೆ ಸೆಳೆಯುತ್ತದೆ.

ಮಕ್ಕಳ ಉಡುಪು ಪ್ರಪಂಚದಲ್ಲಿ ಪಾರದರ್ಶಕ ಉಡುಗೆಗಳಿಗೆ ವಿಶಿಷ್ಟ ಸ್ಥಾನವಿದೆ. ಬಣ್ಣಬಣ್ಣದ, ವಿವಿಧ ವಿನ್ಯಾಸಗಳ ಫ್ರಾಕ್, ಸ್ಕರ್ಟ್‌ಗಳು ಪಾರದರ್ಶಕ ಮಾದರಿಯಲ್ಲಿದ್ದರೆ ಮಕ್ಕಳು ಬಹಳ ಇಷ್ಟಪಡುತ್ತಾರೆ. ಇದು ದುಬಾರಿಯಾಗಿದ್ದರೂ ಫ್ಯಾಷನ್‌ಪ್ರಿಯ ಮಹಿಳೆಯರು ಇಂಥದ್ದೇ ಉಡುಪು ಬೇಕು ಎಂದು ಬೇಡಿಕೆ ಇಡುತ್ತಿದ್ದಾರೆ. ಹೀಗಾಗಿ ಇದೂ ಸಹ ಫ್ಯಾಷನ್ ಟ್ರೆಂಡ್ ಆಗಿಬಿಟ್ಟಿದೆ. ■



ಚಿತ್ರ: ಎಸ್‌.ಕೆ. ದಿನೇಶ್